


International Journal of Kannada Research
www.kannadajournal.com

**ISSN: 2454–5813**
IJKR 2020; 6(3): 15-19
© 2020 IJKR
www.kannadajournal.com
Received: 13-05-2020
Accepted: 15-06-2020

**ಡಾ. ಕೆ. ಗುರುಸ್ವಾಮಿ**
ಸಮಾಜ–ವಿಜ್ಞಾನ ಶಿಕ್ಷಕರು
ಅಲ್ಪಸಂಖ್ಯಾತರ ಮೊರಾರ್ಜಿ
ದೇಸಾಯಿ ವಸತಿ ಶಾಲೆ,
ಹೊಳೆನರಸೀಪುರ, ಹಾಸನ.

**Corresponding Author:**
**ಡಾ. ಕೆ. ಗುರುಸ್ವಾಮಿ**
ಸಮಾಜ–ವಿಜ್ಞಾನ ಶಿಕ್ಷಕರು
ಅಲ್ಪಸಂಖ್ಯಾತರ ಮೊರಾರ್ಜಿ
ದೇಸಾಯಿ ವಸತಿ ಶಾಲೆ,
ಹೊಳೆನರಸೀಪುರ, ಹಾಸನ.

# ಬೂಸಾ ಹೇಳಿಕೆ ಪ್ರಕರಣ: ಕರ್ನಾಟಕದಲ್ಲಿ ದಲಿತ ಚಳವಳಿಯ ತೀವ್ರತೆ

**ಡಾ. ಕೆ. ಗುರುಸ್ವಾಮಿ**

ಕರ್ನಾಟಕದಲ್ಲಿ ದಲಿತ ಚಳವಳಿ ಎಂದರೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ.ದ.ಸಂ.ಸ.)ಯ ಶೋಷಿತ ದಲಿತ ಮತ್ತು ದಲಿತೇತರ ಪರವಾದ ಹೋರಾಟಗಳೆಂತಲೂ, ಕ.ದ.ಸಂ.ಸ. ಎಂದರೆ ಕರ್ನಾಟಕ ದಲಿತ ಚಳವಳಿ ಎಂತಲೂ ಒಂದು ಅರ್ಥಪೂರ್ಣವಾದ ವ್ಯಾಖ್ಯಾನವಿದೆ. ಏಕೆಂದರೆ ಸಂವಿಧಾನ ಜಾರಿಗೆ ಬರುವ ಪೂರ್ವದಿಂದಲೂ ಮಾನವನ ಸಾರ್ವಜನಿಕ ಸಮಾಜದಲ್ಲಿ ಸರ್ವರಿಗೂ ಸಮಾನ ಸ್ಥಾನಮಾನದ ಗೌರವವು ಮರೀಚಿಕೆಯಾಗಿತ್ತು. ಅದರಲ್ಲೂ 'ಮುಟ್ಟಲಾಗದವರು' ಎಂದು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಪರಿಗಣಿಸಲ್ಪಟ್ಟಿದ್ದ ಅಸ್ಪೃಶ್ಯರು, ಹರಿಜನ ಅಥವಾ ದಲಿತರು (ಪರಿಶಿಷ್ಟಜಾತಿ) ಸಮುದಾಯದ ಮೂಲಭೂತ ಸೌಲಭ್ಯ ಮತ್ತು ಸವಲತ್ತುಗಳನ್ನು ಕಸಿದುಕೊಂಡು ಶೋಷಿಸುವುದರ ಮೂಲಕ ತುಳಿಯಲಾಗಿತ್ತು. ಅಲ್ಲದೆ ಸವರ್ಣೀಯ ಜಾತಿಗಳು ಇವರನ್ನು ಬಹಳ ಹೀನವಾಗಿ ನಡೆಸಿಕೊಂಡು ಅಮಾನವೀಯ ಅಚರಣೆಗಳ ಅಭ್ಯಾಸದ ಮೂಲಕ ನಿಕೃಷ್ಟ ಬದುಕಿಗೆ ಕಾರಣೀಭೂತರಾಗಿದ್ದರು. ಇದರಿಂದಾಗಿ ರಾಜ್ಯದೆಲ್ಲೆಡೆ ಹರಿಜನರ ಮೇಲೆ ಅಸ್ಪೃಶ್ಯತಾಚರಣೆ, ಜಾತೀಯತೆ, ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ನಿಷೇಧ, ಹರಿಜನ ಹೆಣ್ಣುಮಕ್ಕಳ ಮೇಲಿನ ಅಮಾನುಷ ಆಚರಣೆಗಳು, ಅತ್ಯಾಚಾರ, ಮಲ ಹೊರುವ ಪದ್ಧತಿ, ಜೀತಗಾರಿಕೆ, ಬಲವಂತ ದುಡಿಮೆ ಇನ್ನು ಮುಂತಾದ ಮಾನವ ವಿರೋಧಿ ಅನ್ಯಾಯ, ದೌರ್ಜನ್ಯಗಳು ರುದ್ರನರ್ತನ ಮಾಡುತ್ತಿದ್ದವು. ಈ ರೀತಿಯ ಸಂದಿಗ್ಧ ಸನ್ನಿವೇಶಗಳು 70–80ರ ದಶಕದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಬಿ. ಬಸವಲಿಂಗಪ್ಪನವರ 'ಬೂಸಾ ಹೇಳಿಕೆ ಪ್ರಕರಣ' ಘಟಿಸಿ ಈ ತೆರನಾದ ಶೋಷಣೆಗಳಿಗೆ ಅಂತ್ಯ ಹಾಡುವ ಪರ್ವಕಾಲಕ್ಕೆ ಕೊಂಡೊಯ್ದಿತು. ಅಲ್ಲದೆ ಬೂಸಾ ಪ್ರಕರಣವು ಕ.ದ.ಸಂ.ಸ.ದ ಸ್ಥಾಪನೆಗೆ ಕಾರಣವಾಗಿ ಕರ್ನಾಟಕದಾದ್ಯಂತ ದಲಿತ ಚಳವಳಿಯ ತೀವ್ರತೆಗೆ ತತ್‌ಕ್ಷಣದ ಕಾರಣವಾಗಿ ಶೋಷಿತ ದಲಿತ ಸಮಾಜದ ಕ್ರಾಂತಿಯ ಕಿಡಿಗೆ ರಣಕಹಳೆಯನ್ನು ಮೊಳಗಿಸಿತ್ತು. ಹೀಗಾಗಿ ಈ ಲೇಖನದಲ್ಲಿ 'ಬಿ. ಬಸವಲಿಂಗಪ್ಪನವರ ಬೂಸಾ ಹೇಳಿಕೆ ಪ್ರಕರಣದ ಹಿನ್ನಲೆ', 'ಬೂಸಾ ಪ್ರಕರಣದಿಂದ ಹರಿಜನ ವಿದ್ಯಾರ್ಥಿಗಳ ಮೇಲಾದ ದೌರ್ಜನ್ಯದ ಸ್ವರೂಪ', 'ದಲಿತ ಲೇಖಕ ಮತ್ತು ಕಲಾವಿದರ ಬಳಗದಿಂದ ಏಕೀಕೃತ ದಲಿತ ಸಂಘಟನೆಗೆ ಚಾಲನೆ', 'ಕ.ದ.ಸಂ.ಸ. ದಿಂದ ಕರ್ನಾಟಕದಲ್ಲಿ ದಲಿತ ಚಳವಳಿಯ ತೀವ್ರತೆ'ಯನ್ನು ಪ್ರಸ್ತುತಪಡಿಸಲು ಇಚ್ಛಿಸಿದೇನೆ.

### ಬೂಸಾ ಹೇಳಿಕೆ ಪ್ರಕರಣದ ಹಿನ್ನಲೆ

ಬಿ. ಬಸವಲಿಂಗಪ್ಪನವರು ಬಿ.ಆರ್. ಅಂಬೇಡ್ಕರ್‌ರವರ ಮಾನವತಾವಾದದ ತತ್ವ, ಸಿದ್ಧಾಂತ, ವಿಚಾರಧಾರೆಗಳಿಂದ ಪ್ರಭಾವಿತರಾಗಿ ಸಂವಿಧಾನದ ಆಶೋತ್ತರಗಳನ್ನು ಮೈಗೂಡಿಸಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ದಲಿತಪರ ಕಾಳಜಿ ಹೊಂದಿದ್ದಂತಹ ಒಬ್ಬ ನಾಸ್ತಿಕ ದಲಿತ ರಾಜಕಾರಣಿ. ಇವರು ತಮ್ಮ ವಿದ್ಯಾರ್ಥಿ ಜೀವನದಿಂದಲೂ ಶೋಷಿತರ ಪರವಾದ ದಲಿತ ಸಂವೇದನಾಶೀಲತೆಯನ್ನು ಹೊಂದಿದ್ದರಿಂದಲೇ ದಲಿತರ ಪ್ರತಿನಿಧಿಯಾಗಿ ರಾಜ್ಯದ ರಾಜಕಾರಣಕ್ಕೆ ಪ್ರವೇಶಿಸಲು ಸಾಧ್ಯವಾಯಿತು. ಇದರಿಂದಾಗಿ ಬಿ. ಬಸವಲಿಂಗಪ್ಪನವರು ಕರ್ನಾಟಕ ಸರ್ಕಾರದಲ್ಲಿ ಪೌರಾಡಳಿತ ಇಲಾಖೆಯಲ್ಲಿ ಸಚಿವರಾಗಿ ದಲಿತರು ಸವರ್ಣೀಯರ ಹಿಂಸೆಯಿಂದ 'ತಲೆಯ ಮೇಲೆ ಮಲ ಹೊರುವ ಪದ್ಧತಿ'ಯನ್ನು ರದ್ದುಮಾಡಿದ ಪ್ರಥಮ ದಲಿತ ರಾಜಕಾರಣಿಯಾದರು. ಅಲ್ಲದೆ 'ಉಳುವವನೇ ಭೂಮಿಯ ಒಡೆಯ' ಎಂಬ ಕಾನೂನಾಧಾರಿತ 'ಭೂ ಸುಧಾರಣಾ ಕಾಯ್ದೆ'ಯನ್ನು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.[1] ಇದರಿಂದಾಗಿ ಇವರ ಪ್ರಖ್ಯಾತಿ ರಾಜ್ಯದಾದ್ಯಂತ ಹರಡಿ ತಮ್ಮ ರಾಜಕೀಯ ಮುತ್ಸದ್ಧಿತನದ ಮೂಲಕ ದಲಿತೋದ್ಧಾರದ ಕಾರ್ಯಕ್ರಮಗಳು ಹಾಗೂ

ಪ್ರಗತಿಪರ ವೈಚಾರಿಕ ಚಿಂತನೆಗಳ ಅನುಷ್ಠಾನಗೊಳಿಸಲು ಶ್ರಮಿಸುತ್ತಿದ್ದರು.

ಇಂತಹ ಸಂದರ್ಭದಲ್ಲಿ ಅಂದರೆ 19ನವೆಂಬರ್, 1973ರಂದು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು ಇಲ್ಲಿ ಎನ್. ಸಂಜೀವಯ್ಯ ಮತ್ತು ಎನ್. ವೀರಭದ್ರಯ್ಯನವರು 'ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್' ಎಂಬ ಸಂಸ್ಥೆಯ ಮೂಲಕ 'ಹೊಸ ಅಲೆ' (ನ್ಯೂ ವೇವ್) ಎಂಬ ವಿಷಯವನ್ನು ಕುರಿತಂತೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು.[2] ಬಿ.ಆರ್. ಅಂಬೇಡ್ಕರ್‌ರವರ ಕನಸಾದ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಡಿ ಸಮಸಮಾಜ ನಿರ್ಮಾಣದ ಜವಾಬ್ದಾರಿ ಮತ್ತು ಕರ್ತವ್ಯಗಳು, ದೇಶದ ಸರ್ವಾಂಗೀಣ ಅಭಿವೃದ್ಧಿಯ ಪಥದಲ್ಲಿ ದಲಿತರ ರಾಜಕೀಯ ಅಸ್ಮಿತೆ ಮತ್ತು ದಕ್ಷವಾಗಿ ಆಡಳಿತ ಸೇವಾನಿರ್ವಹಣೆಯಲ್ಲಿ ಬದ್ಧತೆ ಹಾಗೂ ನಿಪುಣತೆಯನ್ನು ಅಳವಡಿಸಿಕೊಳ್ಳುವ ಕೌಶಲವನ್ನು ತಿಳಿಸಿಕೊಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇಂತಹ ಐತಿಹಾಸಿಕ ಕಾರ್ಯಕ್ರಮಕ್ಕೆ ಸಂಘದ ವತಿಯಿಂದ ಅಂದಿನ ಡಿ. ದೇವರಾಜ ಅರಸು ಮುಖ್ಯಮಂತ್ರಿತ್ವದ ಕರ್ನಾಟಕ ಸರ್ಕಾರದಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಇವರ ಜೊತೆಗೆ ಕೋಲಾರದ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಎಂ. ಆರ್ಮುಗಂರವರು ಕೂಡ ವೇದಿಕೆಯನ್ನು ಹಂಚಿಕೊಂಡಿದ್ದರು. 'ಹೊಸ ಅಲೆ' ಕಾರ್ಯಕ್ರಮವನ್ನು 'ವಿಶಾಲ ಮೈಸೂರು ರಾಜ್ಯ'ವು ಏಕೀಕರಣಗೊಂಡು 1 ನವೆಂಬರ್, 1973ರಲ್ಲಿ 'ಕರ್ನಾಟಕ' ಎಂಬ ನಾಮಧೇಯವನ್ನು ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸುರವರ ಕಾಲದಲ್ಲಿ ಪಡೆದುಕೊಂಡ ಅವಿಸ್ಮರಣೀಯ ಕಾಲಘಟ್ಟದಲ್ಲಿ ಹಮ್ಮಿಕೊಂಡಿದ್ದರಿಂದ ಮರೆಯಲಾಗದ ಸಮಾರಂಭದ ಸೊಬಗನ್ನು ನೀಡಿತ್ತು. ಅಂದು ರಾಜ್ಯದೆಲ್ಲೆಡೆ 'ಕನ್ನಡ ರಾಜ್ಯೋತ್ಸವ'ದ ಅಬ್ಬರದ ಸಂಭ್ರಮ ಮತ್ತು ಸಡಗರದ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಇಂತಹ ಸಂದರ್ಭದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಆಗಮಿಸಿದ್ದ ಮುಖ್ಯ ಅತಿಥಿಗಳನ್ನು ಸ್ವಾಗತಿಸುವ ಹೊಣೆಯನ್ನು ಸಂಜೀವಯ್ಯರವರು ವಹಿಸಿಕೊಂಡಿದ್ದರು. ಇವರು ಮೂಲ ಆಂಗ್ಲ ಭಾಷೆಯಲ್ಲಿ ಪ್ರಖಾಂಡ ಪಾಂಡಿತ್ಯವನ್ನು ಹೊಂದಿದ್ದರಿಂದ ಸ್ವಾಗತ ಕೋರುವ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೇ ಮಾತನಾಡಲು ಪ್ರಾರಂಭಿಸಿದರು. ಆಗ ಈ ಕಾರ್ಯಕ್ರಮದ ಸಭಾಂಗಣದಲ್ಲಿದ್ದ ಅನೇಕ ವಿದ್ಯಾರ್ಥಿಗಳು ಮತ್ತು ಇನ್ನಿತರರು ಕನ್ನಡ, ಕನ್ನಡ ಅಂತ ಕೂಗಿ ಕನ್ನಡದಲ್ಲಿ ಮಾತನಾಡಬೇಕೆಂದು ಒತ್ತಾಯಿಸಿದ್ದರು. ಆಗ ಸಂಜೀವಯ್ಯನವರು ಕನ್ನಡ–ಇಂಗ್ಲಿಷ್ ಮಿಶ್ರಿತವಾಗಿ ಮಾತನಾಡಿ ತಮ್ಮ ಸ್ವಾಗತ ಭಾಷಣವನ್ನು ಮುಗಿಸಿದರು. ನಂತರ ಸಿ.ಎಂ ಆರ್ಮುಗಂರವರು ಉದ್ಘಾಟನಾ ಭಾಷಣ ಮಾಡಬೇಕಾದ ಸಂದರ್ಭ ಒದಗಿಬಂತು. ಈಗಾಗಲೇ ತಿಳಿಸಿರುವ ಹಾಗೆ ಇವರು ಆಂಧ್ರಪ್ರದೇಶದ ಗಡಿಪ್ರದೇಶದ ಕೋಲಾರದ ಶಾಸಕರಾಗಿದ್ದರಿಂದ ಹೆಚ್ಚು ಕನ್ನಡ ಮಾತನಾಡುವ ಕಲೆಯನ್ನು ಕರಗತ ಮಾಡಿಕೊಂಡಿರದ ಕಾರಣ ಇಂಗ್ಲಿಷ್ ಭಾಷೆಯಲ್ಲೇ ಭಾಷಣವನ್ನು ಮಾಡಲು ಆರಂಭಿಸಿದ್ದರು. ಇದರಿಂದ ಅಸಮಾಧಾನಗೊಂಡ ಸಭಿಕರಿಂದ ಕನ್ನಡದಲ್ಲಿ ಮಾತನಾಡಬೇಕೆಂಬ ಬೇಡಿಕೆ ಅಧಿಕಗೊಂಡಿತ್ತು. ಹೀಗಾಗಿ ಆರ್ಮುಗಂರವರು ತರಾತುರಿಯಲ್ಲಿ ತಮ್ಮ ಭಾಷಣವನ್ನು ಮುಗಿಸಿದರು. ಇವರ ನಂತರ ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದ ಬಿ. ಬಸವಲಿಂಗಪ್ಪನವರು ಕಾರ್ಯಕ್ರಮದ ಕುರಿತಾಗಿ ಮಾತನಾಡಲು ನಿರೂಪಕರಿಂದ ಆಹ್ವಾನಿತರಾದರು.

ಇಂತಹ ಸಂದರ್ಭದಲ್ಲಿ ಇವರು ಈಗಾಗಲೇ ಸಭಿಕರು ಕನ್ನಡದಲ್ಲಿ ಭಾಷಣ ಮಾಡಲು ಒತ್ತಾಯಿಸುತ್ತಿದ್ದುದನ್ನು ಗಮನಿಸಿದ್ದರು. ಹೀಗಾಗಿ ಪ್ರಾಸ್ತವಿಕವಾಗಿ ಕನ್ನಡದಲ್ಲಿ ಭಾಷಣವನ್ನು ಮಾಡುವುದರ ಬಗ್ಗೆ ಮಾತನಾಡುತ್ತಾ, "ಕನ್ನಡ ಬರಹಗಳೇನಿದ್ದರೂ ಬೂಸಾ ಇದ್ದಂಗೆ. ಇಂಗ್ಲೀಷ್ ಬರಹಗಳಲ್ಲಿರುವ ಪ್ರೌಢಿಮೆ ಕನ್ನಡ ಸಾಹಿತ್ಯದ ಬ್ರಾಹ್ಮಣರ ಬರಹಗಳಲ್ಲಿರುವುದಿಲ್ಲ. ಹಾಗಾಗಿ ಇವರ ಬರಹಗಳೇನಿದ್ದರೂ ದನ ತಿನ್ನೋಕೆ ಲಾಯಕ್ಕು ಎಂದು ಪ್ರತಿಕ್ರಿಯಿಸಿದ್ದರು.[3] ಬಸವಲಿಂಗಪ್ಪನವರೇ ಹೇಳಿರುವಂತೆ ಇದರರ್ಥ 'ಯಾವ ಸಾಹಿತ್ಯ ಜನರ ನೋವು–ನಲಿವು, ದುಃಖ–ದುಮ್ಮಾನಗಳನ್ನು ಪ್ರತಿಬಿಂಬಿಸುವುದಿಲ್ಲವೋ ಅಂತಹ ಸಾಹಿತ್ಯವು ನಿಷ್ಪ್ರಯೋಜಕವಾದುದಾಗಿದೆ. ಹೀಗಾಗಿ ಸಂಪ್ರದಾಯಬದ್ಧ ಸಾಮಾಜಿಕ ವಿಷಯದ ಸಾಹಿತ್ಯವು ಶ್ರೀಮಂತವಾಗಿರಬೇಕು. ಅಲ್ಲದೆ ಕನ್ನಡ ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳಲ್ಲಿ ಪರಾಕ್ರಮ, ದೇಶಭಕ್ತಿ, ಸಮಾಜವಾದಿ ಸಮಾಜರಚನೆಗೆ ಸಹಾಯವಾಗುವ ವಿಚಾರಗಳು ಲಭ್ಯವಾಗಲಾರವು. ಆದ್ದರಿಂದ ವಿದ್ಯಾರ್ಥಿಗಳು ಪ್ರಪಂಚದಾದ್ಯಂತ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಕ್ರಾಂತಿಗೆ ಕಾರಣವಾದ ಪಾಶ್ಚಿಮಾತ್ಯ ದೇಶಗಳ ಕ್ರಾಂತಿಕಾರಕ ಬರಹಗಳ ಇಂಗ್ಲಿಷ್ ಭಾಷೆಯ ಪುಸ್ತಕಗಳನ್ನು ಓದಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಬೇಕು. ಇಲ್ಲದೆ ಹೋದರೆ ಕನ್ನಡ ಸಾಹಿತ್ಯ ಬೂಸಾ ಇದ್ದಂತೆ ಎಂಬುದಾಗಿತ್ತು.[4]ಇವರ ವಿಮರ್ಶಾತ್ಮಕ ಹೇಳಿಕೆಯನ್ನು ಸರಿಯಾಗಿ ಪರ್ಯಾಲೋಚಿಸಿ ಅರ್ಥೈಸಿಕೊಳ್ಳದೆ ಪಟ್ಟಾಭಿರಾಮನ್ (ಪ್ರಜಾವಾಣಿ ಪತ್ರಿಕೆಯ ವರದಿಗಾರರು) ಎಂಬ ಬ್ರಾಹ್ಮಣ ಸಮುದಾಯದ ಪತ್ರಕರ್ತರು ಬಸವಲಿಂಗಪ್ಪನವರ ವರ್ಚಸ್ಸಿಗೆ ಧಕ್ಕೆ ಬರುವಂತೆ 'ಕನ್ನಡ ಭಾಷೆಯನ್ನು ಬೂಸಾ ಎಂದು ನಮ್ಮ ತಾಯಿನಾಡು ಭಾಷೆಗೆ ಅವಮಾನಿಸಿದ್ದಾರೆ' ಎಂದು ನೀಡಿದ ವರದಿಯು ಈ ಕಾರ್ಯಕ್ರಮವಾದ ಹತ್ತು ದಿನಗಳ ನಂತರ ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು. ಇದರ ಪ್ರಕಟಣೆಯ ಹಿಂದೆ ಬಸವಲಿಂಗಪ್ಪನವರ ಮೇಲಿನ ಜಾತೀಯತೆ ನಿಲುವು ಹಾಗೂ ಇವರ ಮಂತ್ರಿ ಪದವಿಯನ್ನು ಕಸಿದುಕೊಳ್ಳುವ ಹುನ್ನಾರದ ಪೂರ್ವನಿಯೋಜಿತ ಕುಟಿಲ ಯೋಜನೆ ಇದ್ದುದು ಇದರ ಮೂಲಕ ಸಾಬೀತಾಗಿತ್ತು. ಇದರ ಹಿನ್ನಲೆಯಲ್ಲಿ ಬಸವಲಿಂಗಪ್ಪರವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ನೀಡುವವರೆಗೂ ರಾಜ್ಯದಾದ್ಯಂತ ಜಾತಿವಾದಿ ಪ್ರತಿಗಾಮಿತನವನ್ನು ಹೊಂದಿದ್ದ ಮೇಲ್ಜಾತಿಗಳು ಉಗ್ರವಾದ ಪ್ರತಿಭಟನೆ ಮಾಡಿ ದಲಿತರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಲು ಪ್ರಾರಂಭಿಸಿ ಈ ಪ್ರಕರಣಕ್ಕೆ ಜಾತೀಯತೆಯ ಸ್ಪರ್ಶವನ್ನು ಕೊಟ್ಟರು.

**ಬೂಸಾ ಪ್ರಕರಣದಿಂದ ಹರಿಜನ ವಿದ್ಯಾರ್ಥಿಗಳ ಮೇಲಾದ ದೌರ್ಜನ್ಯದ ಸ್ವರೂಪ**

ಪತ್ರಿಕೆಗಳಲ್ಲಿ ಈ ವಿಚಾರ ಪ್ರಕಟಗೊಂಡ ನಂತರ ಮೈಸೂರಿನಿಂದಲೇ ಬೂಸಾ ಹೇಳಿಕೆ ವಿರುದ್ಧ ಪ್ರತಿಭಟನೆಗಳು ಪ್ರಾರಂಭವಾಗಿ ರಾಜ್ಯದಾದ್ಯಂತ ಹರಿಜನರು ಮತ್ತು ವಿದ್ಯಾರ್ಥಿಗಳ ಮೇಲೆ ಹಲ್ಲೆಗಳಾದವು. ಅದರಲ್ಲೂ ಮೈಸೂರಿನಲ್ಲಿ ಅಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಪ್ರೊ.ದೇ. ಜವರೇಗೌಡರು (1969–1975) ತಮ್ಮ ವಿಶ್ವವಿದ್ಯಾನಿಲಯದ ಸವರ್ಣೀಯ ವಿದ್ಯಾರ್ಥಿಗಳನ್ನು ಹಿಂಸಾಕೃತ್ಯಕ್ಕೆ ಪ್ರಚೋದಿಸುವುದರ ಮೂಲಕ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳು ಮತ್ತು ವಿದ್ಯಾರ್ಥಿನಿಲಯಗಳಲ್ಲಿ ದಲಿತ ವಿದ್ಯಾರ್ಥಿಗಳ ಮೇಲಿನ ಹಲ್ಲೆಗಳಿಗೆ ಕಾರಣರಾಗಿದ್ದರೆಂದು ಅಭಿಪ್ರಾಯಗಳು ಕೇಳಿಬಂದಿದ್ದವು.[5] ಕುಲಪತಿಗಳ ಈ ರೀತಿಯ ದಲಿತವಿರೋಧಿ ನೀತಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಹನ್ಯಾಳು ಗ್ರಾಮದ

ಹೆಚ್.ಎನ್. ನಂಜೇಗೌಡರೆಂಬ (ಡಿ. ದೇವರಾಜ ಅರಸುರವರ ಮಂತ್ರಿಮಂಡಲದಲ್ಲಿ ಸಚಿವರು) ರಾಜಕಾರಣಿಯು ಕೂಡ ಎಲ್ಲಾ ರೀತಿಯ ಸಹಕಾರವನ್ನು ನೀಡಿದ್ದರೆಂದು ಅಂದಿನ ದಲಿತ ವಿದ್ಯಾರ್ಥಿಗಳಾಗಿದ್ದ ಕ.ದ.ಸಂ.ಸ.ದ ಹೋರಾಟಗಾರರ ಅಭಿಪ್ರಾಯ. ಹೀಗಾಗಿ ಇಂತಹ ಘಟನೆಗಳು ಮೈಸೂರು ಜಿಲ್ಲೆಗೆ ಮಾತ್ರ ಸೀಮಿತವಾಗದೆ ಇಡೀ ರಾಜ್ಯದಾದ್ಯಂತ ಪಸರಿಸಿ ದಲಿತ ವಿದ್ಯಾರ್ಥಿಗಳ ಮೇಲೆ ಮಾರಣಾಂತಿಕ ಹಲ್ಲೆ, ಅಪಮಾನ, ನಿಂದನೆಗಳು ವ್ಯಾಪ್ತ ರೂಪದಲ್ಲಿ ನಡೆದವು.[6]

ಅಲ್ಲದೆ ಕಾಲೇಜು ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ದೈಹಿಕವಾಗಿ ಕಪ್ಪುಬಣ್ಣ ಹೊಂದಿದ್ದ ವಿದ್ಯಾರ್ಥಿಗಳನ್ನು ಹರಿಜನ ವಿದ್ಯಾರ್ಥಿಗಳೆಂದು ಪರಿಗಣಿಸಿ ಮೇಲ್ವರ್ಗದ ಹಲ್ಲೆಕೋರರು ಮನಸೋಇಚ್ಛೆ ಥಳಿಸುತ್ತಿದ್ದರು. ಜೊತೆಗೆ ಒಂದು ಹಾಸ್ಟೆಲ್‌ನಿಂದ ಮತ್ತೊಂದು ಹಾಸ್ಟೆಲ್‌ಗಳಿಗೆ ದಾಳಿ ಮಾಡಿ ಅಲ್ಲಿದ್ದ ದಲಿತ ವಿದ್ಯಾರ್ಥಿಗಳಿಗೆ ದೈಹಿಕ ಹಿಂಸೆಯನ್ನು ನೀಡಿ ಭಯದ ವಾತಾವರಣವನ್ನು ಸೃಷ್ಟಿಸಿದ್ದರು. ಅಲ್ಲದೆ ಮೇಲ್ಜಾತಿಗಳ ಈ ತೆರನಾದ ದೌರ್ಜನ್ಯಗಳು ಕಾಲೇಜು ಮತ್ತು ವಿದ್ಯಾರ್ಥಿನಿಲಯಗಳಿಗೆ ಸೀಮಿತಗೊಳ್ಳದೆ ನಗರಗಳಲ್ಲಿ ಹರಿಜನರು ವಾಸಿಸುತ್ತಿದ್ದ ಪ್ರದೇಶಗಳ ಮೇಲೂ ಕೂಡ ದಾಳಿ ಮಾಡಿ ಗಲಭೆಗಳಿಗೆ ಕಾರಣರಾಗಿದ್ದರು. ಉದಾಹರಣೆಗೆ: ಮೈಸೂರಿನ ಬಲ್ಲಾಳವೃತ್ತದ ಸಮೀಪದಲ್ಲಿರುವ ಅಶೋಕಪುರಂನಲ್ಲಿ ನೆಲೆಸಿದ್ದ ಬಹುಸಂಖ್ಯಾತ ದಲಿತರಿಗೂ ಹಾಗೂ ಸವರ್ಣೀಯರಿಗೂ ಘರ್ಷಣೆಗಳಾಗಿದ್ದವು.[7]

**ದಲಿತ ಲೇಖಕ ಮತ್ತು ಕಲಾವಿದರ ಬಳಗದಿಂದ ಏಕೀಕೃತ ದಲಿತ ಸಂಘಟನೆಗೆ ಚಾಲನೆ**

ಈಗಾಗಲೇ ಬಿ. ಬಸವಲಿಂಗಪ್ಪರವರ ಬೂಸಾ ಹೇಳಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಸತ್ಯಾಸತ್ಯತೆಗಳನ್ನು ನೇರವಾಗಿ ಗ್ರಹಿಸಿದ್ದ ದಲಿತ ಬುದ್ಧಿಜೀವಿಗಳಾದ ವಿ. ಶ್ರೀನಿವಾಸ್ ಪ್ರಸಾದ್, ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಬಿ.ಕೃಷ್ಣಪ್ಪ, ದೇವಯ್ಯ ಹರವೆ, ಹೆಚ್. ಗೋವಿಂದಯ್ಯ, ರಾಮದೇವ ರಾಕೆ, ಇಂದೂಧರ ಹೊನ್ನಾಪುರ, ಡಿ.ಎಂ. ತಿಮ್ಮರಾಯಪ್ಪ, ಶಿವಾಜಿ ಗಣೇಶನ್ ಮುಂತಾದವರು ಸಭೆ ಸೇರಿ ರಾಜ್ಯದಾದ್ಯಂತ ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಯಲು ದಲಿತ ಸಮುದಾಯದ ಕ್ರಾಂತಿಯ ಕಿಡಿಯಾಗಿ ಸಂಘಟನೆಯೊಂದರ ಅನಿವಾರ್ಯತೆಯಿದೆ ಎಂದು ಚರ್ಚಿಸಿದರು.[8] ಬೂಸಾ ಗಲಭೆಯ ಹಿನ್ನಲೆಯಲ್ಲಿ ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ದಲಿತರ ಮೇಲಿನ ಹಲ್ಲೆಗಳು ಅತಿರೇಕವನ್ನು ತಲುಪಿದ್ದವು. ಈ ಸಂದರ್ಭದಲ್ಲಿ ದಲಿತ ಕವಿ ಸಿದ್ದಲಿಂಗಯ್ಯರವರು ಬೆಂಗಳೂರಿನಲ್ಲಿ 'ವಿಚಾರವಾದಿ ಒಕ್ಕೂಟ'ದ ಮುಖಾಂತರ ಸವರ್ಣೀಯರ ಈ ಅಮಾನುಷ ಹಲ್ಲೆಗಳ ವಿರುದ್ಧ ಪ್ರತಿಭಟನೆ ಮಾಡಿದರು. ಅಲ್ಲದೆ ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್ ಸಂಘಟಕರು ದಲಿತರಿಗೆ 'ದಲಿತಸ್ತಾನ' ಎಂಬ ಪ್ರತ್ಯೇಕ ರಾಷ್ಟ್ರ ಕೊಡಿ ಎಂದು ಉಗ್ರವಾದ ಚಳವಳಿಯ ಮಾದರಿಯಲ್ಲಿ ದಲಿತರಿಗೆ 'ಪ್ರತ್ಯೇಕ ರಾಜ್ಯ' ಕೊಡಿ ಎಂಬ ತಮ್ಮ ಆಕ್ರೋಶದ ಮಾತನ್ನಾಡಿ ಸರ್ಕಾರವೇ ದಿಗ್ಭ್ರಮೆಗೊಳ್ಳುವಂತೆ ಮಾಡಿದ್ದರು. ಕ್ರಮೇಣ ಈ ದಲಿತ ಹಿತಚಿಂತಕರು ದಲಿತರ ಶೋಷಣಾ ವಿರೋಧಿ ಕಾರ್ಯಾಚರಣೆಗೆ ಸಂಘಟನೆಯೊಂದರ ಅನಿವಾರ್ಯತೆ ಇದೆ ಎಂದು ಮನಗಂಡು ಮೈಸೂರಿನ ಅಶೋಕಪುರಂನಲ್ಲಿರುವ ಸಿದ್ದಾರ್ಥ ಹಾಸ್ಟೆಲ್‌ನಲ್ಲಿ ಸಭೆ ಸೇರಿ "ದಲಿತ ಲೇಖಕರ ಮತ್ತು ಕಲಾವಿದ ಬಳಗ'ವನ್ನು ಸ್ಥಾಪಿಸಿಕೊಂಡರು.[9] ತರುವಾಯ ಕುವೆಂಪು, ಯು.ಆರ್. ಅನಂತಮೂರ್ತಿಯವರು ಬಿ. ಬಸವಲಿಂಗಪ್ಪನವರ ಪರವಾದ ಬೂಸಾ ಹೇಳಿಕೆಯನ್ನು ಸಮರ್ಥಿಸಿಕೊಂಡದ್ದರಿಂದ ಇವರ ಬೂಸಾ ಚಳವಳಿಗೆ ಮತ್ತಷ್ಟು ಪುಷ್ಟಿಬಂತು.[10] ಕೊನೆಗೆ ಬಿ. ಬಸವಲಿಂಗಪ್ಪನವರು ಸಚಿವ ಸ್ಥಾನಕ್ಕೆ ನೀಡಿದ ರಾಜೀನಾಮೆಯಿಂದ ಬೂಸಾ ಚಳವಳಿ ನಿಂತಿತು. ಆದರೆ ಬಹುತೇಕ ಜಿಲ್ಲೆಗಳಲ್ಲಿ ಸ್ಥಳೀಯವಾಗಿ ಕಾರ್ಯನಿರ್ವಹಿಸುತ್ತಿದ್ದ ದಲಿತ ಸಂಘಟನೆಗಳನ್ನು ಒಗ್ಗೂಡಿಸಿ ದಲಿತರ ಸರ್ವಾಂಗೀಣ ಅಭಿವೃದ್ಧಿ ಮತ್ತು ಹಿತರಕ್ಷಣೆಗೆ ಏಕೀಕೃತ ಸಂಘಟನೆಯೊಂದನ್ನು ಸ್ಥಾಪಿಸುವ ನಿರ್ಣಯಕ್ಕೆ ಬೂಸಾ ಗಲಾಟೆಯಿಂದ ರೆಕ್ಕೆಪುಕ್ಕಗಳು ಬಂದವು.

ಇದಕ್ಕಾಗಿ ಮೇಲ್ಕಾಣಿಸಿದ ದಲಿತ ಬುದ್ಧಿಜೀವಿಗಳು ಮತ್ತು ಹೋರಾಟಗಾರರು ಮೂರು ಹಂತಗಳಲ್ಲಿ 'ದಲಿತ ಸಾಹಿತ್ಯ ಸಮ್ಮೇಳನ'ಗಳನ್ನು ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಆಯೋಜಿಸಿದರು. ಅವುಗಳಲ್ಲಿ,

1. 10–11ಡಿಸೆಂಬರ್, 1976ರಂದು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಬಿ. ಕೃಷ್ಣಪ್ಪನವರ ನೇತೃತ್ವದಲ್ಲಿ ನಡೆದ ಪ್ರಥಮ 'ದಲಿತ ಲೇಖಕರ ಮತ್ತು ಕಲಾವಿದರ ಬಳಗದ ದಲಿತ ಸಾಹಿತ್ಯ ಸಮ್ಮೇಳನ'.[11]
2. 1977ರ ಸಮಯದಲ್ಲಿ ಕೋಲಾರ ಜಿಲ್ಲೆಯಲ್ಲಿ ನಡೆದ ಎರಡನೇ 'ದಲಿತ ಲೇಖಕರ ಮತ್ತು ಕಲಾವಿದರ ದಲಿತ ಸಾಹಿತ್ಯ ಸಮ್ಮೇಳನ'.[12]
3. 1978ರ ಸಮಯದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದ ಮೂರನೇ 'ದಲಿತ ಲೇಖಕರ ಮತ್ತು ಕಲಾವಿದರ ದಲಿತ ಸಾಹಿತ್ಯ ಸಮ್ಮೇಳನಗಳು' ಪ್ರಮುಖವಾದವುಗಳು.[13]

ಮೇಲ್ಕಂಡ ಮೂರೂ ಸಮ್ಮೇಳನಗಳಲ್ಲಿ ರಾಜ್ಯದ 'ದಲಿತ ಬರಹಗಾರ ಮತ್ತು ಕಲಾವಿದರ ಒಕ್ಕೂಟ'ದ ಚಿಂತಕರು ಹಾಗೂ ಎಲ್ಲಾ ದಲಿತ ಬುದ್ಧಿಜೀವಿಗಳು ಮತ್ತು ಹೋರಾಟಗಾರರು ಭಾಗವಹಿಸಿ ದಲಿತರ ಸ್ವ–ಹಿತ, ಸ್ವ–ರಕ್ಷಣೆ, ಸ್ವಾಭಿಮಾನ, ಸ್ವ–ಸುಧಾರಣೆ, ಸ್ವ–ಪ್ರಗತಿಗಳಿಗಾಗಿ ಸಾಂಸ್ಕೃತಿಕತೆ ಹಿರಿಮೆಯ ಸಂಘಟನಾತ್ಮಕ ದಲಿತ ಚಳವಳಿಯನ್ನು ಪ್ರಾರಂಭಿಸಲು ನಿರ್ಧರಿಸಿ ಸನ್ನದ್ಧರಾದರು. ಈ ಸಂದರ್ಭದಲ್ಲಿ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ 'ದಲಿತ ಕ್ರಿಯಾ ಸಮಿತಿ' (ಬೆಂಗಳೂರು), 'ಚಂಡಾಳರ ಸಂಘ' (ಕೋಲಾರ), 'ದಲಿತ್ ಪ್ಯಾಂಥರ್ಸ್ ಸಂಘಟನೆ' (ಧಾರವಾಡ), 'ದಲಿತ ಸಂಘರ್ಷ ಸಮಿತಿ' (ದ.ಸಂ.ಸ., ಶಿವಮೊಗ್ಗ), ಅಂಬೇಡ್ಕರ್ ಸಂಘ (ಮೈಸೂರು) ಹಾಗೂ ಇನ್ನಿತರ ದಲಿತ ಸಂಘಟನೆಗಳ ನಾಯಕರುಗಳು 1978ರಲ್ಲಿ ಚಿಕ್ಕಮಗಳೂರಿನ ಮೂರನೇ ದಲಿತ ಲೇಖಕರ ಮತ್ತು ಕಲಾವಿದರ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಶಿವಮೊಗ್ಗದ ಭದ್ರಾವತಿಯಲ್ಲಿ ಬಿ. ಕೃಷ್ಣಪ್ಪ ಹಾಗೂ ಪ್ರಮುಖ ಸಹಪಾಠಿಗಳಿಂದ ಸ್ಥಾಪಿತ ದ.ಸಂ.ಸ.ವನ್ನು ತಮ್ಮ ರಾಜ್ಯ ಸಂಘಟನೆಯಾಗಿ ಒಪ್ಪಿಕೊಂಡರು. ಹೀಗಾಗಿ ದ.ಸಂ.ಸ.ವು 'ಕರ್ನಾಟಕ ದಲಿತ ಸಂಘರ್ಷ ಸಮಿತಿ' (ಕ.ದ.ಸಂ.ಸ) ಎಂಬ ಹೆಸರಿನಿಂದ ನಾಮಾಂಕಿತಗೊಂಡು ಅಮೇರಿಕಾದ ಬ್ಲಾಕ್ ಪ್ಯಾಂಥರ್ಸ್ ಹಾಗೂ ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್‌ಗಳ ಮಾದರಿಯಲ್ಲಿ ರಾಜ್ಯದಾದ್ಯಂತ ಶೋಷಣೆಗಳ ವಿರುದ್ಧ ಬಾಯಿದ್ದರೂ ಪ್ರಶ್ನಿಸುವ ಧೈರ್ಯವಿಲ್ಲದೆ ಮೂಕವೇದನೆಯನ್ನು ಅನುಭವಿಸುತ್ತಿದ್ದ ದಲಿತರ ಜೀವನಾಡಿಯಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು.[14]

**ಕ.ದ.ಸಂ.ಸ. ದಿಂದ ಕರ್ನಾಟಕದಲ್ಲಿ ದಲಿತ ಚಳವಳಿಯ ತೀವ್ರತೆ**

ಇದು ರಾಜ್ಯದ ಏಕೀಕೃತ ಸಂಘಟನೆಯಾಗಿ ಹೊರಹೊಮ್ಮಿದ ತಕ್ಷಣದಿಂದಲೇ ದೇಶದ ಪ್ರಜಾತಾಂತ್ರಿಕ ಸಂವಿಧಾನದ ಮಾದರಿಯಂತೆ ಇದರ ರಾಜ್ಯಸಮಿತಿಯ ಸದಸ್ಯರೆಲ್ಲರೂ ಸೇರಿ ತನ್ನ ಸಂಘಟನಾ ಶಕ್ತಿ ಮತ್ತು ಭದ್ರತೆಗೆ ಸಹಕಾರಿಯಾಗುವಂತೆ ತನ್ನದೇ ಆದ 'ಸಂವಿಧಾನ'ವನ್ನು ರಚಿಸಿಕೊಂಡರು. ಜೊತೆಗೆ ಸಂಘಟನೆಯ ಮುಖವಾಣಿಯಾಗಿ 'ಪಂಚಮ' ಪತ್ರಿಕೆಯನ್ನು ಪ್ರಾರಂಭಿಸಿದರು.

ಹಾಗೆಯೇ ಲಾಂಛನವಾಗಿ ಧೈರ್ಯದ ಸಂಕೇತವಾದ 'ನೀಲಿಬಣ್ಣದ ಬಾವುಟ ಹಾಗೂ ಕಸಪೊರಕೆ ಮತ್ತು ಪಿಕಾಸಿ' ಗುರುತಿನ ಚಿಹ್ನೆಯನ್ನು ಅಳವಡಿಸಿಕೊಂಡರು. ಸಮಾಜದಲ್ಲಿ ಶತಶತಮಾನಗಳಿಂದ ಸಮಾಜದಲ್ಲಿ 'ಜಾತೀಯತೆಯ ಕೊಳಕು' ಕಸವಾಗಿ ಜಡ್ಡುಗಟ್ಟಿ ಕೆಟ್ಟವಾಸನೆಯಿಂದ ನಾರುತ್ತಿದ್ದುದನ್ನು ಸಂಘಟನೆಯ ಪಿಕಾಸಿಯಿಂದ ಅಗೆದು ಹೋರಾಟವೆಂಬ ಪೊರಕೆಯಿಂದ ಸ್ವಚ್ಛಗೊಳಿಸಿ ಸಮಾನತೆಯ ನಿರ್ಮಲ ಬದುಕನ್ನು ಕಟ್ಟಿಕೊಳ್ಳುವುದು ಈ ಲಾಂಛನದ ಸಂಕೇತವಾಗಿತ್ತು.[15]

ಹೀಗೆ ಕ.ದ.ಸಂ.ಸ. ಏಕೀಕೃತ ಸಂಘಟನೆಯಾಗಿ ರಾಜ್ಯದಾದ್ಯಂತ ದಲಿತರ ಮೇಲೆ ಯಜಮಾನಿಕೆ ಮಾಡಿಕೊಂಡು ಜಾತೀಯತೆಯ ಕ್ರೌರ್ಯವನ್ನು ಎಸಗುತ್ತಿದ್ದ ಮನುವಾದಿ ಸವರ್ಣೀಯರ ವಿರುದ್ಧ ಕ್ರಾಂತಿಯ ಠೇಂಕಾರವನ್ನು ಮೊಳಗಿಸಿತ್ತು. ಜೊತೆಗೆ ದೇವಸ್ಥಾನ, ಕೆರೆ–ಕಟ್ಟೆ, ಬಾವಿ, ಹೊಟೇಲ್, ಶಾಲೆಗಳು, ಸವರ್ಣೀಯರ ಬೀದಿ, ಮನೆಗಳಲ್ಲಿ ಪ್ರವೇಶ ನಿಷೇಧದ ಅಸ್ಪೃಶ್ಯತಾಚರಣೆ, ಜಾತಿಪದ್ಧತಿ, ಜೀತಗಾರಿಕೆ, ಮುಗ್ಧ ದಲಿತ ಹೆಣ್ಣು ಮಕ್ಕಳು ಹಾಗೂ ಹೆಂಗಸರುಗಳ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ, ಮಾನಹರಣ, ಬೆತ್ತಲೆಸೇವೆ, ದೇವದಾಸಿ, ಬಸವಿ, ಓಕುಳಿಪದ್ಧತಿ, ದಲಿತರಿಗೆ ಮೂತ್ರ ಕುಡಿಸಿದ ಹಾಗೂ ಮಲ ತಿನ್ನಿಸಿದ ಪ್ರಕರಣಗಳು, ಹತ್ಯೆ ಪ್ರಕರಣಗಳು, ಕಗ್ಗೊಲೆಗಳು, ಸಜೀವ ದಹನ ಪ್ರಕರಣಗಳು, ಪ್ರಬಲ ಜಮೀನ್ದಾರರು, ಭೂಮಾಲೀಕರು, ಭೂಒಡೆಯರುಗಳ ದಬ್ಬಾಳಿಕೆಯಿಂದ ದಲಿತರ ಬಲವಂತ ದುಡಿಮೆ, ಅಕ್ರಮ ಭೂ ಆಕ್ರಮಣ, ವರ್ಗಸಂಘರ್ಷ, ಜಾತಿವೈಷಮ್ಯದ ಕೋಮುಘರ್ಷಣೆಗಳ ವಿರುದ್ಧ ಸಿಡಿಲಬ್ಬರದ ಚಳವಳಿಯನ್ನು ಕೈಗೊಂಡು ದಲಿತರನ್ನು ಇವುಗಳಿಂದ ಮುಕ್ತಿಗೊಳಿಸಲು ಪ್ರಯತ್ನಿಸುತ್ತಿದ್ದರು. ಜೊತೆಗೆ ದಲಿತೇತರ ಮೇಲೆ ಅದೇ ವರ್ಗದ ದರ್ಪಿಷ್ಟ ದಬ್ಬಾಳಿಕೆಗಾರರ ಶೋಷಣೆಗಳ ವಿರುದ್ಧವೂ ಕೂಡ 'ಜಾತ್ಯತೀತ' ಮನೋಭಾವದಿಂದ ಹೋರಾಟ ಮಾಡುತ್ತಿದ್ದರು. ಉದಾಹರಣೆಗೆ: ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಟೇಕಲ್ಲ ಹೋಬಳಿ, ಹುಣಸೀಕೋಟೆಯ ಕುಂಬಾರ ಜಾತಿಯ ಅನಸೂಯಮ್ಮಳ ಮೇಲಿನ ಅತ್ಯಾಚಾರ ಪ್ರಕರಣ ಮತ್ತು ಈಕೆಯ ತಂದೆ ಶೇಷಗಿರಿಯಪ್ಪನ ಕಗ್ಗೊಲೆ, ಮಂಡ್ಯ ಜಿಲ್ಲೆಯ ಎ. ನಾಗತೀಹಳ್ಳಿಯಲ್ಲಿನ ಒಕ್ಕಲಿಗ ಮಹಿಳೆ ಮೀನಾಕ್ಷಮ್ಮಳ ಮೇಲಿನ ಭೂ ದೌರ್ಜನ್ಯ, ಕಂಚನಹಳ್ಳಿ ಗಂಗಾಧರಮೂರ್ತಿ ಕೊಲೆ ಪ್ರಕರಣ ಮುಂತಾದವುಗಳು ಪ್ರಮುಖವಾದವುಗಳು.[16]ನೆರೆಹೊರೆಯ ರಾಜ್ಯಗಳಲ್ಲಿ (ಕಿಲ್ವನ್ಮಣಿ, ಬೆಲ್ಚಿ, ಪಿಫ್ರಾ, ಕರಂಚೇಡು, ಚುಂಡೂರು, ಕೆಸ್ತಾರ, ದೇವ್ಲೋಲಿ, ರಾಯಪುರ, ಸಾಧುಪುರ, ಬಜಿತ್‌ಪುರ, ನಾಗಪಟ್ಟಣ, ಉದಯಪುರ, ಮುಜಾಫರ್‌ನಗರ ಇತ್ಯಾದಿ)ನ ದಲಿತ ಸಮುದಾಯಗಳ ಭೀಕರ ಹತ್ಯೆ, ನರಮೇಧ, ಹತ್ಯಾಕಾಂಡ, ಮಾರಣಹೋಮಗಳ ವಿರುದ್ಧ ಆಕ್ರೋಶಗೊಂಡು ತಮ್ಮ ರಕ್ತವನ್ನು ಬಾಟಲಿನಲ್ಲಿ ತುಂಬಿ ಕಳುಹಿಸುವ ಮೂಲಕ ದುರ್ಬಲ ಕೇಂದ್ರಸರ್ಕಾರ ಹಾಗೂ ಅಲ್ಲಿನ ರಾಜ್ಯಸರ್ಕಾರಗಳ ವಿರುದ್ಧ ಅಬ್ಬರಿಸಿದ್ದರು.[17] ಅಲ್ಲದೆ ತಮ್ಮ ಬೇಜವಾಬ್ದಾರಿ ಅರಾಜಕತೆಯ ಸರ್ಕಾರದ ಮುಖ್ಯಮಂತ್ರಿಗಳು, ಸಚಿವರು, ಶಾಸಕರುಗಳ ವಿರುದ್ಧ ಬಡವರ ಸಂಸಾರವನ್ನು ನಾಶಗೊಳಿಸುತ್ತಿದ್ದ ಹೆಂಡ, ಸಾರಾಯಿ ನಿಷೇಧ, ಎಲ್ಲಾ ಜಾತಿಗಳ ಬಡದಲಿತ ವಿದ್ಯಾರ್ಥಿಗಳಿಗೆ ವಸತಿ ಶಾಲೆ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಉತ್ತಮ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆಗಾಗಿ ಗೆರಾವು, ಮುಷ್ಕರ, ಪ್ರತಿಭಟನೆಗಳನ್ನು ಮಾಡುತ್ತಾ ಅವರಲ್ಲಿ ನಡುಕವನ್ನುಂಟು ಮಾಡಿದ್ದರು.[18]

## ಸಮಾರೋಪ

ಒಟ್ಟಾರೆ ಬಿ. ಬಸವಲಿಂಗಪ್ಪನವರ ಬೂಸಾ ಹೇಳಿಕೆ ಪ್ರಕರಣವು ರಾಜ್ಯದಲ್ಲಿ ದಲಿತ ಸಮುದಾಯಗಳ ಧ್ವನಿಯಾಗಿ ಏಕೀಕೃತ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಉದ್ಭವಕ್ಕೆ ತತ್‌ಕ್ಷಣದ ಕಾರಣವಾಯಿತು. ಜೊತೆಗೆ ಈ ಘಟನೆಯು ಜಾತಿವಾದಿ ದೌರ್ಜನ್ಯಕಾರರುಗಳಿಂದ ಮುಗ್ಧ ಶೋಷಿತ ಸಮುದಾಯಗಳ ಮೇಲೆ ತೀವ್ರತರವಾದ ಎಂತಹದ್ದೇ ಶೋಷಣೆಗಳಾದರೂ ಇದನ್ನು ಎದುರಿಸಿ ನಿಂತು ಜಾತ್ಯತೀತವಾಗಿ ನ್ಯಾಯ ದೊರಕಿಸಿಕೊಡುವ ಕ.ದ.ಸಂ.ಸ.ದ ಸಂಘಟನಾ ಶಕ್ತಿಯ ಹೋರಾಟಗಳಿಗೆ ಅಡಿಪಾಯವನ್ನು ಹಾಕಿಕೊಟ್ಟಿತು ಎಂದು ನಿಸ್ಸಂದೇಹವಾಗಿ ಹೇಳಬಹುದು.

## ಕೊನೆಟಿಪ್ಪಣಿಗಳು


1. ಎಫ್.ಹೆಚ್. ಜಕ್ಕಪ್ಪ, ನಾಡಚೇತನ ಬಿ. ಬಸವಲಿಂಗಪ್ಪ, ಪುಟ6–7, 10.
2. ಲಕ್ಷ್ಮೀನಾರಾಯಣ ನಾಗವಾರ, ಬಿ. ಬಸವಲಿಂಗಪ್ಪ ಮತ್ತು ಬೂಸಾ ಚಳವಳಿ ಕಾಲುಶತಮಾನ, 1999. ಪುಟ24.
3. ರಾಮದೇವ ರಾಕೆ (ಪಂಚಮ ಪತ್ರಿಕೆಯ ವರದಿಗಾರರು ಮತ್ತು ಸಂಪಾದಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 16 ಜನವರಿ, 2011.
4. ಅರವಿಂದ ಮಾಲಗತ್ತಿ, ದಲಿತ ಮಾರ್ಗ, 2002, ಪುಟ434.
5. ಶ್ರೀನಿವಾಸ್ ಪ್ರಸಾದ್‌ರವರ ಭಾಷಣ, 'ದಲಿತ ಚಳವಳಿಯ ಅನಿವಾರ್ಯತೆ' ಪುಸ್ತಕ ಬಿಡುಗಡೆ ಸಮಾರಂಭ, ವೀಣೆ ಶೇಷಣ್ಣ ಭವನ, ಮೈಸೂರು, ಗುರುವಾರ, 2 ಮೇ, 2010.
6. ಸಂದೇಶ್ (ಕ.ದ.ಸಂ.ಸ.ದ ಹಿರಿಯ ಮುಖಂಡರು ಮತ್ತು ಬರಹಗಾರರು, ಹಾಸನ ಜಿಲ್ಲೆ)ರವರ ಸಂದರ್ಶನ, ಬುಧವಾರ, 6ಮೇ, 2020.
7. ಚನ್ನಕೇಶವಮೂರ್ತಿ (ಕ.ದ.ಸಂ.ಸ.ದ ದಲಿತ ವಿದ್ಯಾರ್ಥಿ ಒಕ್ಕೂಟದ ಹೋರಾಟಗಾರರು, ಮೈಸೂರು)ರವರ ಸಂದರ್ಶನ, ಗುರುವಾರ, 24ಫೆಬ್ರವರಿ, 2011.
8. ಸಿದ್ದಲಿಂಗಯ್ಯ, ಜನಸಂಸ್ಕೃತಿ, 2007, ಪುಟ145.
9. ಅದೇ..........., ಪುಟ144–145.
10. ಯು.ಆರ್. ಅನಂತಮೂರ್ತಿ(ಕನ್ನಡ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಮತ್ತು ಪ್ರಗತಿಪರ ಚಿಂತಕರು) ರವರ ಸಂದರ್ಶನ, ಭಾನುವಾರ, 2ಜನವರಿ, 2011.
11. ಸರಜೂ ಕಾಟ್ಕರ್, ಕನ್ನಡ ಮರಾಠಿ ದಲಿತ ಸಾಹಿತ್ಯ, 1996, ಪುಟ43–44.
12. ಎಂ. ವೆಂಕಟಸ್ವಾಮಿ (ರಾಜ್ಯಾಧ್ಯಕ್ಷರು, ಸಮತಾ ಸೈನಿಕ ದಳ, ಬೆಂಗಳೂರು) ರವರ ಸಂದರ್ಶನ, ಶುಕ್ರವಾರ, 7 ಜನವರಿ, 2011.
13. ದೇವನೂರು ಮಹಾದೇವ (ಮಾಜಿ ರಾಜ್ಯ ಸಂಚಾಲಕರು, ಕ.ದ.ಸಂ.ಸ. ಹಾಗೂ ದಲಿತಪರ ಕವಿಗಳು ಮತ್ತು ಹೋರಾಟಗಾರರು, ಮೈಸೂರು) ರವರ ಸಂದರ್ಶನ, ಶನಿವಾರ, 8 ಜನವರಿ, 2011.
14. ಹೆಚ್. ಗೋವಿಂದಯ್ಯ (ನಿವೃತ್ತ ಪ್ರಾಧ್ಯಾಪಕರು ಹಾಗೂ ಕ.ದ.ಸಂ.ಸ. ಹೋರಾಟಗಾರರು ಮತ್ತು ಕವಿಗಳು, ಪಂಚಮ ಪತ್ರಿಕೆಯ ಸಂಪಾದಕರು, ಮೈಸೂರು) ರವರ ಸಂದರ್ಶನ, ಭಾನುವಾರ, 2 ಜನವರಿ, 2011.
15. ಗುರುಪ್ರಸಾದ್ ಕೆರಗೋಡು (ಕ.ದ.ಸಂ.ಸ. ರಾಜ್ಯ ಸಂಚಾಲಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 19 ಡಿಸೆಂಬರ್, 2010.
16. ಬಿ.ಎಸ್. ಚಂದ್ರಶೇಖರನ್ (ನಿವೃತ್ತ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮಂಡ್ಯ ಹಾಗೂ

ಕ.ದ.ಸಂ.ಸ.ದ ಹೋರಾಟಗಾರರು ಮತ್ತು ಪ್ರಗತಿಪರ ಚಿಂತಕರು, ಮಂಡ್ಯ) ರವರ ಸಂದರ್ಶನ, 2012.

17. ಎಸ್. ಗಣೇಶನ್, ದಲಿತರ ಮೇಲಿನ ದೌರ್ಜನ್ಯಗಳು, 1981, ಪುಟ7–11.
18. ಗುರುಪ್ರಸಾದ್ ಕೆರಗೋಡು (ಕ.ದ.ಸಂ.ಸ. ರಾಜ್ಯ ಸಂಚಾಲಕರು, ಮಂಡ್ಯ) ರವರ ಸಂದರ್ಶನ, ಭಾನುವಾರ, 19 ಡಿಸೆಂಬರ್, 2010.